**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ ಇವರ ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖಾ ಸಚಿವರ ಉತ್ತರ:-**

## <u>ವಿಷಯ</u>

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸನ್ 2019ರಲ್ಲಿ ಅಂಗನವಾಡಿ ಮೇಲ್ವಿಚಾರಕರು ಹುದ್ದೆಗೆ ನೇಮಕಾತಿ ಮಾಡಿಕೊಂಡಿದ್ದು ಸದರಿ ನೇಮಕಾತಿ ಅಡಿಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಕಾರ್ಯರೂಪಕ್ಕೆ ಮಾಡದೆ ಇರುವ ಬಗ್ಗೆ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವರ ಗಮನ ಸೆಳೆಯುವುದು.

## ಉತ್ತರ

ಕರ್ನಾಟಕ ಲೋಕಸೇವಾ ಆಯೋಗದಿಂದ ದಿನಾಂಕ:13/02/2019ರ ಅಧಿಸೂಚನೆಯಂತೆ 628 ಮಹಿಳಾ ಮೇಲ್ವಿಚಾರಕಿಯರನ್ನು ಆಯ್ಕೆ ಮಾಡಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಹಂಚಿಕೆ ಮಾಡಿ ಅಂತಿಮ ಆಯ್ಕೆಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಅದರಂತೆ ಆಯ್ಕೆಗೊಂಡ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಇಲಾಖೆಯಲ್ಲಿ ಪರಿಶೀಲಿಸಿ ಪೊಲೀಸ್ ಪರಿಶೀಲನಾ ವರದಿ, ಜಾತಿ ಸಿಂಧುತ್ವ ಪ್ರಮಾಣ ಪತ್ರ ಹಾಗೂ ಶೈಕ್ಷಣಿಕ ಅಂಕಪಟ್ಟಿಗಳ ನೈಜತೆ ಪರಿಶೀಲನೆ ಸ್ವೀಕೃತಗೊಂಡಿರುವ 541 ಅಭ್ಯರ್ಥಿಗಳಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯದ ಕಛೇರಿ ಆದೇಶ ಸಂಖ್ಯೆ: ಮಮಅ/ನಿಸಿಮೇ/56/2018-19(ಭಾಗ-6), ರನ್ವಯ ವಿವಿಧ ದಿನಾಂಕಗಳಂದು ನೇಮಕಾತಿ ಆದೇಶವನ್ನು ಹೊರಡಿಸಲಾಗಿರುತ್ತದೆ.

ಕರ್ನಾಟಕ ಲೋಕ ಸೇವಾ ಆಯೋಗದ ಆಯ್ಕೆಪಟ್ಟಿಯಂತೆ ಆಯ್ಕೆಯಾದ ಆಭ್ಯರ್ಥಿಗಳಲ್ಲಿ ಇಲಾಖೆಯಲ್ಲಿ ಮೂಲ ದಾಖಲಾತಿಗಳ ಪರಿಶೀಲನೆಗೆ ಹಾಜರಾಗದೇ ಇದ್ದವರಿಗೆ ದಿ:06/08/2020ರ ಪತ್ರದಲ್ಲಿ ಅಂತಿಮ ನೋಟಿಸ್ ನೀಡಲಾಗಿದ್ದು ಅದರಂತೆ ಇನ್ನುಳಿದ 70 ಅಭ್ಯರ್ಥಿಗಳು ಹಾಜರಾಗದೇ ಇದ್ದ ಕಾರಣ ಸದರಿ 70 ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಪಡಿಸಿ ಇದೇ ಮೀಸಲಾತಿಯಡಿ ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಇಲಾಖೆಗೆ ಒದಗಿಸುವಂತೆ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪತ್ರ ಸಂಖ್ಯೆ:ಮಮಅ/ನಿಸಿಮೇ/56/2018-19(ಭಾಗ-6) ದಿನಾಂಕ:19/11/2020 ಹಾಗೂ ಅ.ಸ.ಪತ್ರ ಸಂಖ್ಯೆ: ಮಮಅ/ನಿಸಿಮೇ/56/2018-19(ಭಾಗ-6) ದಿನಾಂಕ:12/02/2021ರಲ್ಲಿ ಕೋರಲಾಗಿತ್ತು.

ಅದರಂತೆ ಕರ್ನಾಟಕ ಲೋಕ ಸೇವಾ ಆಯೋಗದಿಂದ ಸಂಖ್ಯೆ: R(4)3940/21/ಪಿಎಸ್ ಸಿ, ದಿನಾಂಕ:15/01/2021 ಮತ್ತು ಸಂಖ್ಯೆ: R(4) 4451/20-21/ಪಿಎಸ್ ಸಿ, ದಿನಾಂಕ:25/03/2021ರ ಪತ್ರಗಳಲ್ಲಿ ನಿಯಮಾನುಸಾರ ಹೆಚ್ಚುವರಿ ಆಯ್ಕೆಪಟ್ಟಿಯು 01 ವರ್ಷ 06 ತಿಂಗಳಿಗೆ ಚಾಲ್ತಿಯಲ್ಲಿದ್ದು, 01 ವರ್ಷ 09 ತಿಂಗಳ ನಂತರ ಹೆಚ್ಚುವರಿ ಆಯ್ಕೆಪಟ್ಟಿಗೆ ಬೇಡಿಕೆ ಪತ್ರ ಸ್ವೀಕೃತವಾಗಿರುವುದರಿಂದ, ಹೆಚ್ಚುವರಿ ಆಯ್ಕೆಪಟ್ಟಿಯನ್ನು ಒದಗಿಸಲು ನಿಯಮಾನುಸಾರ ಅವಕಾಶವಿರುವುದಿಲ್ಲವೆಂದು ತಿಳಿಸಿರುತ್ತಾರೆ.

2019ನೇ ಸಾಲಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ನೇರ ನೇಮಕಾತಿ ಮೂಲಕ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಮೇಲ್ವಿಚಾರಕಿ ವೃಂದದ ಹುದ್ದೆಗೆ ನೇಮಕಾತಿ ನೀಡಿದ ವಿವರ ಕೆಳಕಂಡಂತಿದೆ.

| ಕ್ರ. ಸಂ | ವರ್ಗೀಕರಣ (ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿ ಅನ್ವಯ) | ಕೆ.ಪಿ.ಎಸ್.ಸಿ ಯಿಂದ ಸ್ವೀಕರಿಸಿದ ಆಯ್ಕೆಪಟ್ಟಿ ಸಂಖ್ಯೆ | ನೇಮಕಾತಿಗೊಂಡು ಸ್ಥಳ ನಿಯುಕ್ತಿಗೊಳಿಸಿದ ಅಭ್ಯರ್ಥಿಗಳ ಸಂಖ್ಯೆ | ನೇಮಕಾತಿ ನೀಡಬೇಕಾಗಿರುವ ಅಭ್ಯರ್ಥಿಗಳ ಸಂಖ್ಯೆ | ದಾಖಲಾತಿ ಪರಿಶೀಲನೆ ಹಂತದಲ್ಲಿರುವ ಅಭ್ಯರ್ಥಿಗಳ ಸಂಖ್ಯೆ | ಮೇಲ್ವಿಚಾರಕಿಯರ ಹುದ್ದೆಯ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಪಡಿಸಿರುವ ಹುದ್ದೆಗಳ ಸಂಖ್ಯೆ |
|---|---|---|---|---|---|---|
| 1 | In-Service ಅಭ್ಯರ್ಥಿಗಳು | 02 | 00 | 00 | --- | 02 |
| 2 | 10 ವರ್ಷ ಎಸ್.ಎಸ್.ಎಲ್.ಸಿ ಉತ್ತೀರ್ಣ ಹೊಂದಿದ ಅಂಗನವಾಡಿ ಕಾರ್ಯಕರ್ತೆಯರು | 156 | 155 | 00 | 00 | 01 |
| 3 | 07 ವರ್ಷ ಸೇವಾ ಅನುಭವ ಮತ್ತು ಪದವೀಧರ ಅಂಗನವಾಡಿ ಕಾರ್ಯಕರ್ತೆಯರು | 97 | 96 | 00 | 01 | --- |
| 4 | ಪದವೀಧರ ಸಾಮಾನ್ಯ ಅಭ್ಯರ್ಥಿಗಳು | 324 | 244 | 00 | 15 | 65 |
| 5 | HKP ಎಸ್.ಎಸ್.ಎಲ್.ಸಿ ಉತ್ತೀರ್ಣ ಹೊಂದಿದ ಅಂಗನವಾಡಿ ಕಾರ್ಯಕರ್ತೆಯರು | 21 | 21 | 00 | --- | --- |
| 6 | HKP ಪದವೀಧರ ಅಂಗನವಾಡಿ ಕಾರ್ಯಕರ್ತೆಯರು | 28 | 25 | 00 | 01 | 02 |
| | ಒಟ್ಟು | 628 | 541 | 00 | 17 | 70 |

2019ನೇ ಸಾಲಿನಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದಿಂದ ಸ್ವೀಕೃತಗೊಂಡಿದ್ದ ಒಟ್ಟು 628 ಅಭ್ಯರ್ಥಿಗಳಲ್ಲಿ 541 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಲಾಗಿದ್ದು, 70 ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಪಡಿಸಲಾಗಿದೆ, ಉಳಿದಿರುವ 17 ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ ಹಂತದಲ್ಲಿರುವುದರಿಂದ ಸದರಿ ಅಭ್ಯರ್ಥಿಗಳಿಗೆ ದಾಖಲಾತಿ ಪರಿಶೀಲನೆ ಪ್ರಕ್ರಿಯೆ ಪೂರ್ಣಗೊಂಡ ನಂತರ ನೇಮಕಾತಿ ಆದೇಶ ನೀಡಲಾಗುವುದು.

ಕರ್ನಾಟಕ ಲೋಕ ಸೇವಾ ಆಯೋಗವು ನಿಯಮಾನುಸಾರ ಹೆಚ್ಚುವರಿ ಆಯ್ಕೆ ಪಟ್ಟಿಯ ಸಿಂಧುತ್ವವು 01 ವರ್ಷ 6 ತಿಂಗಳು ಮಾತ್ರ ಇದ್ದು, ಆ ಅವಧಿ ಮುಗಿದಿರುವುದರಿಂದ ಹೆಚ್ಚುವರಿ ಪಟ್ಟಿ ಒದಗಿಸಲು ನಿಯಮಾನುಸಾರ ಅವಕಾಶವಿಲ್ಲವೆಂದು ತಿಳಿಸಿರುತ್ತದೆ. ಈ ಕಾರಣದಿಂದಾಗಿ ಇಲಾಖೆಗೆ 2019ನೇ ಸಾಲಿನ ಮಹಿಳಾ ಮತ್ತು ಮಕ್ಕಳ ಇಲಾಖೆಯಲ್ಲಿನ ಮಹಿಳಾ ಮೇಲ್ವಿಚಾರಕಿ ಹುದ್ದೆಗೆ ಹೆಚ್ಚುವರಿ ಆಯ್ಕೆಪಟ್ಟಿ ಸ್ವೀಕೃತಗೊಂಡಿರುವುದಿಲ್ಲ.

Halappa BA

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲ ಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಸಚಿವಾಲಯ,